# ನನ್ನ ದೇಹ ನನ್ನದು



**ಮೇಘಾ ಯಲಿಗಾರ್**
ಕಾರ್ಪೊರೇಟ್ ಉದ್ಯೋಗಿ

ಪ್ರಪಂಚದಾದ್ಯಂತ ಸ್ತ್ರೀ ಸಬಲಿಕರಣಕ್ಕೆ ಗರ್ಭನಿರೋಧಕ ಗುಳಿಗೆಗಳ ಕೊಡುಗೆ ಅಪಾರ ಎಂಬ ವಾದವೊಂದಿದೆ. ಗಂಡಸರ ಸ್ವತ್ತಾಗಿದ್ದ ಸಂತಾನ ನಿಯಂತ್ರಣ ಮತ್ತು ಲೈಂಗಿಕ ಆಯ್ಕೆಯನ್ನು ಮಹಿಳೆಯರು ತಮ್ಮದಾಗಿಸಿಕೊಂಡು ಅನಗತ್ಯ ಗರ್ಭಧಾರಣೆ, ಅಸುರಕ್ಷಿತ ಗರ್ಭಪಾತಗಳನ್ನೂ ತಪ್ಪಿಸಿಕೊಂಡಿದ್ದು ನಿಜವಾದರೂ ಮಹಿಳೆಯರಿಗೆ ಸಲೀಸಾಗಿ ದೊರಕಿದ ಈ ಸ್ವಾತಂತ್ರ್ಯದ ಹಿಂದೆಯೂ ಪುರುಷಾಧಿಪತ್ಯದ ಕರಾಳ ನೆರಳಿವೆ.

ಎರಡನೇ ವಿಶ್ವ ಯುದ್ಧದ ಬಳಿಕ ಮಹಿಳೆಯರು ಅನಿವಾರ್ಯವಾಗಿ ದುಡಿಮೆಗೆ ಧುಮುಕಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಫ್ಯಾಕ್ಟರಿಗಳಲ್ಲಿ ದುಡಿಯುವ ಕೆಳವರ್ಗದ ಮಹಿಳೆಯರಿಂದ ಹಿಡಿದು ದೊಡ್ಡ ಹುದ್ದೆಯವರೆಗೂ ದುಡಿಯುವ ಆಳಾಗಿ ಮಹಿಳೆ ಗುರುತಿಸಿಕೊಂಡಾಗ, ಆಕೆಯ ಆದಾಯ ದೇಶದ ಪ್ರಗತಿಗೆ ಕೊಡುಗೆ ನೀಡತೊಡಗಿದಾಗ ಆಕೆ ಬಸುರಿ, ಬಾಣಂತನಗಳ ನೆಪವನ್ನೊಡ್ಡದೆ ಗಾಣಕ್ಕೆ ತಿರುಗಲಿ ಎಂಬ ದುಷ್ಟ ಸಂಚಿನೊಂದಿಗೆ ಈ ಗರ್ಭನಿರೋಧಕಗಳನ್ನು ಮತ್ತಷ್ಟು–ಮಗದಷ್ಟು ಜನಪ್ರಿಯಗೊಳಿಸಲಾಯಿತು. ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಜನಸಂಖ್ಯಾನಿಯಂತ್ರಣದ ಹೆಸರಿನಲ್ಲಿ ಟ್ಯೂಬೆಕ್ಟಮಿ, ಓರಲ್ ಪಿಲ್ ಮುಂತಾದ ರೂಪದಲ್ಲಿ ಹೆಣ್ಣಿನ ದೇಹದ ಮೇಲೆಯೇ ಅಧಿಕಾರ ಚಲಾಯಿಸಲಾಯಿತು. ಮಕ್ಕಳನ್ನು ಹೆರುವುದರ ಜೊತೆಗೆ ಸಂತಾನ ನಿಯಂತ್ರಣದ ಹೆಚ್ಚುವರಿ ಹೊರೆಯನ್ನೂ ಆಕೆಯ ಹೆಗಲಿಗೆ ಹೊರಸಿ ನಿಟ್ಟುಸಿರುಬಿಟ್ಟಿತು ಪಿತ್ರಪ್ರಧಾನ ವ್ಯವಸ್ಥೆ.

ಮಕ್ಕಳನ್ನು ಹೆರುವ ಬಗ್ಗೆಯಾಗಲಿ, ಸಂತಾನ ನಿಯಂತ್ರಣದ ಬಗ್ಗೆಯಾಗಲಿ ಸಂಪೂರ್ಣ ಸ್ಪಷ್ಟತೆಯಿಲ್ಲದಾಗ ಹೆಣ್ಣು ತನ್ನ ದೇಹವನ್ನು ಸಮಾಜದ, ದೇಶದ, ವ್ಯವಸ್ಥೆಯ, ಯೋಜನೆಗಳ ಮರ್ಜಿಗೆ ಬಿಟ್ಟಾಗ ಎಲ್ಲವೂ ಸರಿಯಿತ್ತು! ಆಗ ಆಕೆ ಕೇವಲ ಅವುಗಳು ಬಯಸುತ್ತಿದ್ದ ಸರಕನ್ನು ಪೂರೈಸುತ್ತಿದ್ದ ಅಥವಾ ನಿಯಂತ್ರಿಸುತ್ತಿದ್ದ ಫ್ಯಾಕ್ಟರಿಯಾಗಿದ್ದಳು. ಅಲ್ಲಿ ಆಕೆಯ ಅಭಿಪ್ರಾಯಗಳಿಗೆ ಬೆಲೆಯಿರಲಿಲ್ಲ. ಆದರೆ ಯಾವಾಗ ಹೆಣ್ಣು ಇದೇ ಗರ್ಭನಿರೋಧಕಗಳು ನೀಡಿದ ಆತ್ಮವಿಶ್ವಾಸದಿಂದ ತನ್ನ ಲೈಂಗಿಕತೆಯ ಬಗ್ಗೆ ಸ್ಪಷ್ಟತೆಯನ್ನು ಪಡೆಯುತ್ತ, ಮಕ್ಕಳನ್ನು ಹೆರುವುದು ಬಿಡುವುದು ತನ್ನ ಆಯ್ಕೆ ಎಂದಳೋ ಪಿತೃಪ್ರಧಾನ ವ್ಯವಸ್ಥೆ ಬೆಚ್ಚಿಬಿದ್ದಿತು.

ಹೆಣ್ಣಿನ ದೇಹವನ್ನು ಕೇವಲ ತಮ್ಮ ಬೇಡಿಕೆಗಳನ್ನು ಪೂರೈಸುವ ಫ್ಯಾಕ್ಟರಿಯಂದೇ ಪರಿಗಣಿಸುವ ವ್ಯವಸ್ಥೆ ಆಕೆ ‘ತನ್ನ ದೇಹ ತನ್ನದು’ ಎಂಬ ಒಡೆತನವನ್ನು ಸ್ಥಾಪಿಸದಂತೆ ಕಾಪಾಡಿಕೊಳ್ಳಲು, ಕಾಲಕಾಲಕ್ಕೆ ತನ್ನ ಕುಟುಂಬ ವ್ಯವಸ್ಥೆ, ಕುಟುಂಬ ಯೋಜನೆಯೆಂಬ ನೆಪಗಳನ್ನು ನೀಡುತ್ತಲೇ ಬರುತ್ತದೆ. ಇಲ್ಲಿ ಆಧುನಿಕ ಮಹಿಳೆಗೆ ಮಗು ಬೇಡ, ಸಾಂಪ್ರದಾಯಿಕ ಮಹಿಳೆ ಹೆಚ್ಚು ಮಗು ಹೆರುತ್ತಾಳೆ ಎಂಬುದು ನೆಪವಷ್ಟೇ. ಈ ಎಲ್ಲ ನೆಪಗಳು ಹೆಣ್ಣಿನ ದೇಹದ ಮೇಲೆ ಹಕ್ಕು ಸ್ಥಾಪಿಸುವ ಒಂದೇ ಹೊಂಚಿನ ಎರಡು ಮುಖಗಳು ಮಾತ್ರ.

ಅಂಥವರನ್ನು ಒಟ್ಟಾರೆಯಾಗಿ ‘ಮಾಡರ್ನ್ ಮಹಿಳೆಯರು’ ಎಂದು ಹೀಯಾಳಿಸಿ, ಅವರ ಮಾತುಗಳನ್ನೆಲ್ಲಾ ತಳ್ಳಿಹಾಕಿಬಿಡುತ್ತಾರೆ.

ಟ್ರೆಡಿಶನಲ್ ಸಂಸಾರಗಳು ಕುಟುಂಬದ ಸೌಖ್ಯವನ್ನು ಕಾಯುತ್ತವೆ ಎಂದು ಹೇಳುವಾಗ, ಅದೇ ಟ್ರೆಡಿಶನಲ್ ಕುಟುಂಬಗಳಲ್ಲಿ ಹೆಣ್ಣು ಹೇಗೆ ಸದಾಕಾಲವೂ ಎರಡನೆಯ ದರ್ಜೆಯವಳಾಗಿಯೇ ಇರಬೇಕಾಗುತ್ತದೆ ಎನ್ನುವುದನ್ನು ಇವರು ಬೇಕೆಂದೇ ಮರೆತುಬಿಡುತ್ತಾರೆ. ಇವರು ಹೇಳುವ ಈ ಸೋಕಾಲ್ಡ್ ‘ಮಾಡರ್ನ್’ ಮಹಿಳೆಯರ ಎದುರಾಗಿ ಇವರು ಮಾದರಿಯಾಗಿ ನಿಲ್ಲಿಸುವ ‘ಟ್ರೆಡಿಶನಲ್’ ಮಹಿಳೆಯರೆಂದರೆ ಯಾರು? ಅವರು ಇವರ ‘ವ್ಯಾಖ್ಯಾನ’ಕ್ಕೆ ಅನುಸಾರವಾಗಿ ‘ಒಳ್ಳೆಯ’ ತಾಯಿ – ಹೆಂಡತಿ – ಸೋದರಿ – ಮಗಳು ಆಗಿದ್ದು, ಇವರ ಸೇವೆಗಾಗಿ ಮಾತ್ರ ಅಸ್ತಿತ್ವದಲ್ಲಿ ಇರಬೇಕು. ಇವರ ಸಾಮಾಜಿಕ ಅಂತಸ್ತು ಹೆಚ್ಚಿಸುವಂತೆ ಚೆನ್ನಾಗಿ ಓದಬೇಕು, ಒಳ್ಳೆಯ ಕೆಲಸ ಹಿಡಿಯಬೇಕು, ಚೆಂದಕ್ಕೆ ಕಾಣಬೇಕು, ಸೋಶಿಯಲ್ ಸರ್ಕಲ್‌ಗಳಲ್ಲಿ ಭಾಗಿಯಾಗಬೇಕು. ಆದರೆ ಇದೆಲ್ಲವನ್ನೂ ಇವರು ಹೇಳಿದಾಗ ಮಾತ್ರ ಮಾಡಬೇಕು. ಇವರು ತಲೆಯಾಡಿಸಿದರೆ ಅವೆಲ್ಲವನ್ನೂ ಬದಿಗಿಟ್ಟು ಒಪ್ಪಿತ ಪಾತ್ರಗಳನ್ನು ಹೊತ್ತು ಮುಗುಳ್ನಗಬೇಕು.

ಮನೆಯ ಗಂಡುಮಕ್ಕಳಷ್ಟೇ ಅಥವಾ ಒಮ್ಮೊಮ್ಮೆ ಅದಕ್ಕೂ ಹೆಚ್ಚು ಕಷ್ಟಪಟ್ಟು ಇವರು ಓದಿದ್ದಾರೆ, ಕೆಲಸ ಹುಡುಕಿಕೊಂಡಿದ್ದಾರೆ. ಅದುವರೆಗೂ ಅವರ ಬುದ್ಧಿವಂತಿಕೆಯನ್ನು ಹೊಗಳಲಾಗಿರುತ್ತದೆ. ಆದರೆ ಮದುವೆ ಆದಮೇಲೆ ಅವರು ಮತ್ತೆ ‘ಟ್ರೆಡಿಶನಲ್’ ಆವರಣಕ್ಕೆ ಹಿಂದಿರುಗಲೇಬೇಕು. ಹಾಗೆ ಹಿಂದಿರುಗಲಿ ಎನ್ನುವ ಒತ್ತಡ ಮನೆಯವರದ್ದು, ನೆರೆಹೊರೆಯವರದ್ದು, ನೆಂಟರದ್ದು, ಸಮಾಜದ್ದು, ಎಲ್ಲರದ್ದೂ. ಅವರ ನಿರ್ವಚನದ ಪ್ರಕಾರ ‘ಸೆಟ್ಲ್’ ಆದಾಗ ಮಾತ್ರ ಆ ಹುಡುಗಿ ಗೆದ್ದಹಾಗೆ. ಈ ಒತ್ತಡವನ್ನು ಸಹಿಸಲಾಗದೆ, ತಾನು ಬಯಸುವ ಕೆಲಸ–ಕೆರಿಯರ್ ಬಗ್ಗೆ ಪ್ಯಾಶನೇಟ್ ಆಗಿದ್ದು, ಅಥವಾ ಮದುವೆಯಾಗಲೀ ಮಗುವಾಗಲಿ ಆಕೆಗೆ ಬೇಡದೆ ಇದ್ದು, ಅದನ್ನು ಸಾಧಿಸಿಕೊಂಡರೆ ತಕ್ಷಣವೇ ಸಮಾಜದ ಸ್ವಾಸ್ಥ್ಯಕ್ಕೆ ಹೊರೆಯಾಗಿಬಿಡುತ್ತಾಳೆ.

ಇದು ಸಾಮಾಜಿಕ ಸ್ಥಿತ್ಯಂತರದ ಕಾಲ. ದಿಟ್ಟ ವ್ಯಕ್ತಿತ್ವ ಬೆಳೆಸಿಕೊಳ್ಳುವುದು, ಜವಾಬ್ದಾರಿ ತೆಗೆದುಕೊಳ್ಳುವುದು ಮತ್ತು ಅದನ್ನು ನಡೆಸುವುದು ನಮಗೆ ಒಂದು ಆಕರ್ಷಣೆ ಮತ್ತು ಸವಾಲು. ಜೊತೆ ಜೊತೆಗೆ ಮಕ್ಕಳನ್ನೂ ನೋಡಿಕೊಂಡು ‘ಸೂಪರ್ ವುಮನ್’ಗಳಾಗುವ ಕಟ್ಟಾಸೆ. ಹೆಣ್ಣೊಬ್ಬಳು ಸ್ಟ್ರಾಂಗ್ ಅಂದತಕ್ಷಣ ಮೊದಲು ಸ್ವಲ್ಪ ಪ್ರತಿರೋಧ ಬರುತ್ತದೆ, ಟೀಕೆ ಬರುತ್ತದೆ, ಆದರೆ ಬರಬರುತ್ತಾ ಹಾಗೆ ಟೀಕೆ ಮಾಡಿದವರೂ ಆ ಹೆಂಗಸರ ತಲೆ ಮೇಲೆ ಜವಾಬ್ದಾರಿ ಹೊರಿಸಿ, ಬೇಸರವಾದಾಗ ಅವರನ್ನು ಟೀಕೆ ಮಾಡಿಕೊಂಡು ದಿನ ತಳ್ಳಿಬಿಡುತ್ತಾರೆ. ಆ ಹೆಣ್ಣುಗಳೋ ತಮ್ಮ ಜವಾಬ್ದಾರಿಯ ಜೊತೆಗೆ ಟೀಕೆಗಳನ್ನೂ ಹೊತ್ತು ಹೇಗೋ ಮುಂದೆ ಹೆಜ್ಜೆ ಎಳೆಯುತ್ತಾ ಹೋಗುತ್ತಿರುತ್ತಾರೆ. ಅವರ ಮೇಲಿನ ಶಾಪವೆಂದರೆ ಅವರು ‘ನನ್ನ ಕೈಲಿ ಆಗದು’ ಎಂದು ಹೇಳಲಾರರು.

